# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಧು ಜಿ ಮಾದೇಗೌಡ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 218 |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ಸೂಪರ್ ಸೀಡ್ ಆಗಿರುವ ಸಹಕಾರ ಸಂಘಗಳು ಯಾವುವು (ತಾಲ್ಲೂಕುವಾರು, ಸಹಕಾರ ಸಂಘವಾರು ಮಾಹಿತಿ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ಸೂಪರ್ ಸೀಡ್ ಆಗಿರುವ ಸಹಕಾರ ಸಂಘ ತಳಗವಾದಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಆಗಿದ್ದು. ಈ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಹಾಗೂ ಹಣ ದುರುಪಯೋಗಗಳ ಬಗ್ಗೆ ದಿನಾಂಕ:26-05-2022 ರಂದು ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಯಿಂದ ನೋಟೀಸ್ ನೀಡಿ ತದನಂತರ ಆದೇಶ ಸಂಖ್ಯೆ: ಡಿ.ಆರ್.ವೈ/ಎ1/ಎಕ್ಸ್ಎಸ್.ಎನ್/01/2022-23 ದಿನಾಂಕ:04-07-2022 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ - 1959ರ ಪ್ರಕರಣ 30(1) ರನ್ವಯ ಸೂಪರ್ ಸೀಡ್ ಮಾಡಲಾಗಿರುತ್ತದೆ.<br><br>ಸದರಿ ಆದೇಶದ ವಿರುದ್ಧ ಸಂಘದ ಆಡಳಿತ ಮಂಡಳಿಯು ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ಇವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ: ಜೆಆರ್ಎಂ/ಡಿಎಪಿ/04/2022-23 ಮೇಲ್ಮನವಿ ದಾಖಲಿಸಿದ್ದು, ಮೇಲ್ಮನವಿಯ ಆದೇಶದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಮಂಡ್ಯ ಜಿಲ್ಲೆ ಮಂಡ್ಯ ರವರ ಸೂಪರ್ ಸೀಡ್ ಮಾಡಲಾದ ಆದೇಶವನ್ನು ಎತ್ತಿ ಹಿಡಿಯಲಾಗಿರುತ್ತದೆ. ಇದಕ್ಕೆ, ಗೌ: ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 16119/2022 (CS-RES) ಪ್ರಶ್ನಿಸಿದ್ದು, ದಿನಾಂಕ:15-11-2022 ರಂದು ತಡೆಯಾಜ್ಞೆ ನೀಡಿರುತ್ತದೆ. |
| ಆ) | ಸೂಪರ್ ಸೀಡ್ ಆಗಿರುವ ಸಹಕಾರ ಸಂಘಗಳಲ್ಲಿ ದುರುಪಯೋಗ ಆಗಿರುವ ಮೊತ್ತ ಎಷ್ಟು; ಈ ಪೈಕಿ | ತಳಗವಾದಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಸಹಕಾರ ಸಂಘದಲ್ಲಿ ಮೇಲ್ನೋಟಕ್ಕೆ ಅವ್ಯವಹಾರ ಕಂಡು ಬಂದಿರುವ |

| | | |
|---|---|---|
| | ಎಷ್ಟು ಮೊತ್ತವನ್ನು ವಸೂಲು ಮಾಡಲಾಗಿದೆ; ಬಾಕಿ ಇರುವ ಮೊತ್ತ ಎಷ್ಟು : ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ತಾಲ್ಲೂಕುವಾರು, ಸಹಕಾರ ಸಂಘವಾರು ಮಾಹಿತಿ ನೀಡುವುದು) | ಹಿನ್ನಲೆಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ, ಮಂಡ್ಯ ಇವರು ಒಟ್ಟು 06 ಆರೋಪಗಳನ್ನು ಗುರುತಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರ ವಿಚಾರಣೆ ನಡೆಸಲು ದಿನಾಂಕ: 12-03-2021 ರಂದು ಆದೇಶವಾಗಿರುತ್ತದೆ.<br>ಸದರಿ ಆದೇಶದ ವಿರುದ್ಧ ಆಡಳಿತ ಮಂಡಳಿ ಸದಸ್ಯರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 13125/2021 ರಂತೆ ಪ್ರಕರಣ ದಾಖಲಿಸಿ ದಿನಾಂಕ:03-08-2021 ರಂದು ಕಲಂ 64 ರ ವಿಚಾರಣೆಯ ಆದೇಶಕ್ಕೆ ತಡೆಯಾಜ್ಞೆ ಪಡೆದಿರುತ್ತಾರೆ.<br>ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಇವರು ತಡೆಯಾಜ್ಞೆ ತೆರವುಗೊಳಿಸುವ ಬಗ್ಗೆ ಕಂಡಿಕೆವಾರು ಷರಾವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ತಡೆಯಾಜ್ಞೆ ತೆರವಿಗೆ ಕ್ರಮವಿಡಲಾಗಿದೆ.<br>ಸಂಘದ ಲೆಕ್ಕಪರಿಶೋಧನೆಯು 2019-20ರ ವರೆಗೆ ಜರುಗಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ ಹಣ ದುರುಪಯೋಗ ಪ್ರಕರಣಗಳು ಕಂಡುಬಂದಿರುವುದಿಲ್ಲ. 2020-21 ಹಾಗೂ 2021-22ನೇ ಸಾಲಿನ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿರುತ್ತದೆ. |
| ಇ) | ಸೂಪರ್ ಸೀಡ್ ಆಗಿರುವ ಸಹಕಾರ ಸಂಘಗಳ ಪುನರ್ ಸ್ಥಾಪನೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸಹಕಾರ ಸಂಘವಾರು ವಿವರ ನೀಡುವುದು) | ತಳಗವಾದಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(1) ರನ್ವಯ ಸೂಪರ್ ಸೀಡ್ ಮಾಡಿದ ಆದೇಶಕ್ಕೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ರವರ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಿದ್ದು, ಮೇಲ್ಮನವಿಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಮಂಡ್ಯ ರವರ ಆದೇಶವನ್ನು ಎತ್ತಿ ಹಿಡಿದಿರುವ ಆದೇಶದ ವಿರುದ್ಧ ಗೌ.ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 16119/2022 (CS.RES) ದಿ:15-11-2022 ರ ಆದೇಶದ ರೀತ್ಯಾ ತಡೆಯಾಜ್ಞೆ ನೀಡಲಾಗಿರುತ್ತದೆ. ನ್ಯಾಯಾಲಯದ ತಡೆಯಾಜ್ಞೆ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಳಿ ಮುಂದುವರೆಯುತ್ತಿದ್ದು, ಪುನರ್ ಸ್ಥಾಪನೆ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಈ) | ಮಂಡ್ಯ ಜಿಲ್ಲೆಯಲ್ಲಿ ಆಡಿಟ್ ಮಾಡಿಸದಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಕರ್ತವ್ಯಲೋಪ ಎಸಗಿರುವ ಅಧ್ಯಕ್ಷರು ಮತ್ತು ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ದಿನಾಂಕ: 31-03-2022ರ ಅಂತ್ಯಕ್ಕೆ ಆಡಿಟ್ ಮಾಡಿಸದಿರುವ ಸಹಕಾರ ಸಂಘಗಳು 578 ಗಳಿದ್ದು ಈ ಪೈಕಿ ಸ್ಥಗಿತಗೊಂಡ ಸಹಕಾರ ಸಂಘಗಳು 172 ಇದ್ದು, ಸಮಾಪನೆಗೊಂಡ ಸಹಕಾರ ಸಂಘಗಳು 62, ಕಾರ್ಯನಿರತ ಸಹಕಾರ ಸಂಘಗಳು 344 ಗಳಿರುತ್ತವೆ. ವಾರ್ಷಿಕ ಮಹಾಸಭೆಯಲ್ಲಿ ಆಡಿಟ್ ವರದಿ ಮಂಡಿಸದಿರುವ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಪ್ರಕರಣ 27(2) ರೀತ್ಯಾ ವಿಚಾರಣೆ ನಡೆಸಲಾಗುತ್ತಿದ್ದು ತಪ್ಪಿತಸ್ಥರ ವಿರುದ್ಧ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಸಿಒ 12 ಸಿಆರ್‌ಸಿ 2023**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**